ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಅರವಿಂದ ಕುಮಾರ್ ಅರಳಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1281

ಉತ್ತರಿಸಬೇಕಾದ ದಿನಾಂಕ : 08-03-2022

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಸರ್ಕಾರದ ನಿಯಂತ್ರಣದಲ್ಲಿದೆಯೇ;	ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಸರ್ಕಾರವು ಷೇರು ಹೊಂದಿಲ್ಲದೆ ಇರುವುದರಿಂದ ಸರ್ಕಾರಿ ಸಾಮ್ಯದ ಸಂಸ್ಥೆಯಾಗಿರದೆ, ಒಂದು ಸ್ವಾಯತ್ತ ಸಂಸ್ಥೆಯಾಗಿರುತ್ತದೆ. ಆದರೆ ಸಹಕಾರ ಸಂಘಗಳ ಕಾಯ್ದೆ 1959 ರ ಮತ್ತು ನಿಯಮ 1960 ರ ಅವಕಾಶಗಳನ್ವಯ ಸಹಕಾರ ಇಲಾಖೆಯಿಂದ ಬ್ಯಾಂಕಿನ ಬೈಲಾ ತಿದ್ದುಪಡಿ, ಚುನಾವಣೆ, ವಿಚಾರಣೆ ಮತ್ತು ಪರಿವೀಕ್ಷಣೆಗಳನ್ನು ನಡೆಸಲಾಗುತ್ತದೆ.
ಆ)	ಇಲ್ಲದಿದ್ದಲ್ಲಿ, ಈ ಬ್ಯಾಂಕಿಗೆ ಸರ್ಕಾರದಿಂದ ಅಧಿಕಾರಿಗಳನ್ನು ನೇಮಕ ಮಾಡುವುದು ಯಾವ ಉದ್ದೇಶಕ್ಕಾಗಿ;	ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಿ ನೇಮಕ ಮಾಡಬಹುದಾದ ಕುರಿತಂತೆ ಸಹಕಾರ ಸಂಘಗಳ ನಿಯಮ 1960 ಕ್ಕೆ ಅನುಸೂಚಿಯಲ್ಲಿ ನಮೂದಿಸಿರುವಂತೆ ಸರ್ಕಾರದಿಂದ ಓರ್ವ ಐ.ಎ.ಎಸ್ ಅಧಿಕಾರಿಯ ಪ್ರತಿನಿಯೋಜನೆ ಅಥವಾ ಸಹಕಾರ ಇಲಾಖೆಯಿಂದ ಸಹಕಾರ ಸಂಘಗಳ ಜಂಟಿ ನಿಬಂಧಕರ ಹುದ್ದೆಗಿಂತ ಕಡಿಮೆ ಇಲ್ಲದ ಅಧಿಕಾರಿಯನ್ನು ಪ್ರತಿನಿಯೋಜನೆ ಅಥವಾ Fit and Proper Criteria ರನ್ವಯ ನೇಮಕ ಮಾಡಿಕೊಳ್ಳಬೇಕಾಗಿರುತ್ತದೆ. ಇದರ ಅವಕಾಶದಂತೆ ಬ್ಯಾಂಕಿಗೆ ಸರ್ಕಾರಿ ಅಧಿಕಾರಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ನೇಮಕ ಮಾಡಲಾಗಿದೆ.
ಇ)	ಈ ಬ್ಯಾಂಕಿಗೆ ಅನುಚ್ಛೇದ 371(ಜೆ) ಅನ್ವಯಿಸುವುದಿಲ್ಲವೇ;	ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತಕ್ಕೆ ಅನುಚ್ಛೇಧ 371(ಜೆ) ಅನ್ವಯವಾಗುವ ಬಗ್ಗೆ ಬ್ಯಾಂಕಿನಿಂದ ಸ್ಪಷ್ಟೀಕರಣ ಕೋರಿದ್ದ ಮೇರೆಗೆ ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆ, ಇವರುಸಹಕಾರಿ ಸಂಘ ಸಂಸ್ಥೆಗಳಿಗೆ ಅನುಚ್ಛೇಧ 371-ಜೆ ಅನ್ವಯವಾಗುವ ಬಗ್ಗೆ ಅಡ್ವೊಕೇಟ್ ಜನರಲ್‌ರವರಿಂದ ಅಭಿಪ್ರಾಯವನ್ನು ಪಡೆದಿದ್ದು, ಸಹಕಾರ ಸಂಘ ಸಂಸ್ಥೆಗಳು ಸರ್ಕಾರದ ನಿಯಂತ್ರಣಕ್ಕೆ ಒಳಪಡದೆ ಇರುವುದರಿಂದ ಸದರಿ ಸಂಸ್ಥೆಗಳಿಗೆ ಅನುಚ್ಛೇಧ 371(ಜೆ) ಅನ್ವಯವಾಗುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ. **ಅನುಬಂಧ-01ರಲ್ಲಿ ನೀಡಲಾಗಿದೆ**

...2

ಈ)	371 (ಜೆ) ಯಡಿಯಲ್ಲಿ ನೇಮಕಾತಿ ಮಾಡಿಕೊಳ್ಳುವುದಕ್ಕೆ ಅವಕಾಶವಿದ್ದಲ್ಲಿ, ಪದೋನ್ನತಿಗೆ ಏಕೆ ಅನ್ವಯಿಸುವುದಿಲ್ಲ;	ಕರ್ನಾಟಕರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತಕ್ಕೆ ಅನುಚ್ಛೇಧ 371(ಜೆ) ಅನ್ವಯವಾಗುವ ಬಗ್ಗೆ ಬ್ಯಾಂಕಿನಿಂದ ಸ್ಪಷ್ಟೀಕರಣ ಕೋರಿದ್ದ ಮೇರೆಗೆ ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆ, ಇವರು ಸಹಕಾರಿ ಸಂಘ ಸಂಸ್ಥೆಗಳಿಗೆ ಅನುಚ್ಛೇಧ 371(ಜೆ) ಅನ್ವಯವಾಗುವ ಬಗ್ಗೆ ಅಡ್ವೊಕೇಟ್ ಜನರಲ್‌ರವರಿಂದ ಅಭಿಪ್ರಾಯವನ್ನು ಪಡೆದಿದ್ದು, ಸಹಕಾರ ಸಂಘ ಸಂಸ್ಥೆಗಳು ಸರ್ಕಾರದ ನಿಯಂತ್ರಣಕ್ಕೆ ಒಳಪಡದೆ ಇರುವುದರಿಂದ ಸದರಿ ಸಂಸ್ಥೆಗಳಿಗೆ ಅನುಚ್ಛೇಧ 371ಜೆ ಅನ್ವಯವಾಗುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ. ಬ್ಯಾಂಕು 2016–17ನೇ ಸಾಲಿನಲ್ಲಿ ಹೊರಡಿಸಿದ್ದ ನೇಮಕಾತಿ ಪ್ರಕಟಣೆಯಲ್ಲಿ ಕಲಂ 371(ಜೆ) ಅಡಿಯಲ್ಲಿ ಬರುವ ಅಭ್ಯರ್ಥಿಗಳಿಗೆ ಮೀಸಲಾತಿ ಕಲ್ಪಿಸಿದ್ದನ್ನು ಪ್ರಶ್ನಿಸಿ, ಬ್ಯಾಂಕಿನ ನೌಕರರ ಸಂಘದವರು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ.38542/2017 ಸಲ್ಲಿಸಿರುತ್ತಾರೆ. ಸದರಿ ರಿಟ್ ಅರ್ಜಿಯು ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಬ್ಯಾಂಕ್ ಕಲಂ 371(ಜೆ) ಅಡಿಯಲ್ಲಿ ನೇಮಕಾತಿ ಮಾಡಿಕೊಂಡ ನೌಕರರಿಗೆ ಪದೋನ್ನತಿ ನೀಡಿರುವುದಿಲ್ಲ. ಆದಾಗ್ಯೂ ಕಲ್ಯಾಣ ಕರ್ನಾಟಕ ವ್ಯಾಪ್ತಿಗೆ ಒಳಪಡುವ 17 ಜನರನ್ನು ಪರಿಗಣಿಸಿ ಪದೋನ್ನತಿ ನೀಡಲಾಗಿದೆ.
ಉ)	ಕಳೆದ ಮೂರು ಅಧಿವೇಶನಗಳಲ್ಲಿ ಪ್ರಶ್ನೆಗಳ ಮೂಲಕ ಪದೋನ್ನತಿಯ ಪಟ್ಟಿ ನೀಡುವಂತೆ ಒತ್ತಾಯಿಸಿದ್ದರೂ, ಈ ಪಟ್ಟಿಯನ್ನು ನೀಡದಿರಲು ಕಾರಣವೇನು?	ಬ್ಯಾಂಕಿನ ಮಾನವ ಸಂಪನ್ಮೂಲ ಹಾಗೂ ಸೇವಾ ನಿಯಮದಂತೆ ಬ್ಯಾಂಕಿನ ಸಿಬ್ಬಂದಿಗಳಿಗೆ ಪದೋನ್ನತಿಯನ್ನು ನೀಡಲಾಗಿರುತ್ತದೆ. ಈ ಪೈಕಿ ಕಲ್ಯಾಣ ಕರ್ನಾಟಕ ವ್ಯಾಪ್ತಿಗೆ ಒಳಪಡುವ 17 ಜನರನ್ನು ಪರಿಗಣಿಸಿ ಪದೋನ್ನತಿ ನೀಡಲಾಗಿದೆ. ವಿವರವನ್ನು **ಅನುಬಂಧ–02**ರಲ್ಲಿ ನೀಡಲಾಗಿದೆ.

ಸಂಖ್ಯೆ ಸಿಒ 88 ಸಿಎಲ್ಎಸ್ 2022

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 46 ಹ್ಯತಉ 2021

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ 14.12.2021

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
ವಿಧಾನ ಸೌಧ, ಬೆಂಗಳೂರು-560001.

ಇವರಿಗೆ:

ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ,
ಉತ್ತುಂಗ, ನಂ.1, ಪಂಪ ಮಹಾಕವಿ ರಸ್ತೆ,
ಚಾಮರಾಜಪೇಟೆ,
ಬೆಂಗಳೂರು - 560018

ಮಾನ್ಯರೇ,

ವಿಷಯ: ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತಕ್ಕೆ ಅನುಚ್ಛೇದ 371ಜೆ ಅನ್ವಯವಾಗುವ ಬಗ್ಗೆ ಸ್ಪಷ್ಟೀಕರಣ ಕೋರಿರುವ ಕುರಿತು

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಮುಕಾನಿ/ಸಿವಿ/ಕ.ರ/2978/2021-22, ದಿನಾಂಕ 25.11.2021.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದ ಕಡೆಗೆ ಗಮನಸೆಳೆಯಲಾಗಿದೆ. ಈ ಹಿಂದೆ ಸಹಕಾರಿ ಸಂಘ ಸಂಸ್ಥೆಗಳಿಗೆ ಅನುಚ್ಛೇದ 371ಜೆ ಅನ್ವಯವಾಗುವ ಬಗ್ಗೆ ಅಡ್ವೊಕೇಟ್ ಜನರಲ್‌ರವರ ಅಭಿಪ್ರಾಯವನ್ನು ಪಡೆಯಲಾಗಿದ್ದು, ಸಹಕಾರ ಸಂಘ ಸಂಸ್ಥೆಗಳು ಸರ್ಕಾರದ ನಿಯಂತ್ರಣಕ್ಕೆ ಒಳಪಡದೆ ಇರುವುದರಿಂದ ಸದರಿ ಸಂಸ್ಥೆಗಳಿಗೆ ಅನುಚ್ಛೇದ 371ಜೆ ಅನ್ವಯವಾಗುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ. ಆದರೆ ಈಗಾಗಲೆ ಕೆಲವು ಸಹಕಾರ ಸಂಸ್ಥೆಗಳಲ್ಲಿ ಅನುಚ್ಛೇದ 371(ಜೆ) ರನ್ವಯ ಮೀಸಲಾತಿ ನಿಗದಿಪಡಿಸಿ ನೇರ ನೇಮಕಾತಿ ಹಾಗೂ ಮುಂಬಡ್ತಿಗಳನ್ನು ನೀಡಲಾಗಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲು ಸದರಿ ವಿಷಯವನ್ನು ಸಚಿವ ಸಂಪುಟ ಉಪ ಸಮಿತಿ ಮುಂದೆ ಮಂಡಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಸದರಿ ವಿಷಯವನ್ನು ಈ ಹಿಂದೆ ನಡೆದ ಸಚಿವ ಸಂಪುಟ ಉಪ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದ್ದು, ಈ ವಿಷಯದ ಮೇಲೆ ಯಾವುದೇ ನಿರ್ಣಯ ತೆಗೆದುಕೊಳ್ಳದೆ ಮುಂದೂಡಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯು ಕೈಗೊಳ್ಳುವ ನಿರ್ಣಯದಂತೆ ಕ್ರಮವಹಿಸುವ ಷರತ್ತಿಗೊಳಪಟ್ಟು ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಬಹುದಾಗಿದೆಯೆಂದು ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಹರೀಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ
'ಉತ್ತುಂಗ', ನಂ. 1, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560 018
☎ 26676325, 26679374, 22976600, ಫ್ಯಾಕ್ಸ್: 080-26628521

ವಿಧಾನ ಪರಿಷತ್ ಸದಸ್ಯರಾದ ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ (UN-STARRED) ಪ್ರಶ್ನೆ ಸಂಖ್ಯೆ 1281 ಕ್ಕೆ ಅನುಬಂಧ – 2

ಬ್ಯಾಂಕಿನಲ್ಲಿ ಹೈದರಾಬಾದ್ ಕರ್ನಾಟಕ ವ್ಯಾಪ್ತಿಗೆ ಒಳಪಡುವ ಪದೋನ್ನತಿ ಹೊಂದಿದ ಸಿಬ್ಬಂದಿಗಳ ವಿವರ

ಕ್ರಮ ಸಂಖ್ಯೆ	ಹೆಸರು
1	ಶ್ರೀ ಬಸವರಾಜ ಎಸ್ ಸಜ್ಜನ
2	ಶ್ರೀಮತಿ ಶಿವಲೀಲಾ
3	ಶ್ರೀ ಆದೆಪ್ಪ
4	ಶ್ರೀ ಪ್ರವೀಣಕುಮಾರ್ ತಂದೆ ಶಿವಣ್ಣ
5	ಶ್ರೀ ಚನ್ನಬಸಪ್ಪ
6	ಶ್ರೀ ಸದಾನಂದ ರೆಡ್ಡಿ
7	ಶ್ರೀಮತಿ ಜ್ಯೋತಿ ತಂದೆ ನಾಗರೆಡ್ಡಿಗೌಡ
8	ಶ್ರೀಮತಿ ಶೈಲಜಾ ಎಸ್
9	ಶ್ರೀ ಶರಣಪ್ಪ ತಂದೆ ಭೀಮರಾಯ
10	ಶ್ರೀ ಶರಣಪ್ಪ ತಂದೆ ಕೆ.ಆರ್ ಶೆಟ್ಟಿ
11	ಶ್ರೀ ಸಿದ್ಲಿಂಗಪ್ಪ ಬಿ
12	ಶ್ರೀ ಸಂಗಮೇಶ್ ಡಂಬಳ
13	ಶ್ರೀ ಶರಣಪ್ಪಗೌಡ
14	ಶ್ರೀ. ಕತ್ತೆ ಬೆನ್ನೂರು ರಾಜಶೇಖರ ಗೌಡ
15	ಶ್ರೀ ವೀರೇಶ್
16	ಶ್ರೀ ಮಂಜುನಾಥ ಜೀವಣ್ಣವರ್
17	ಶ್ರೀ ಈರಪ್ಪ ಕಡದಳ್ಳಿ

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕ.ರಾ.ಸ ಅಪೆಕ್ಸ್ ಬ್ಯಾಂಕ್ ನಿ.,